ಕರ್ನಾಟಕ ವಿಧಾನ ಸಭೆ

ಮಂಗಳವಾರ ೧೬ ನೇ .ಫೆಬ್ರವರಿ ೧೯೯೩
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ ೧೧.೦೫ ಗಂಟೆಗೆ
ಸಮಾವೇಶಗೊಂಡಿತು.
ಅಧ್ಯಕ್ಷರು: (ಶ್ರೀ.ಎ.ಎಸ್. ಕೌಜಲಗಿ ಅವರು)
ಪೀಠವನ್ನು ಅಲಂಕರಿಸಿದ್ದರು.
-:೦:-

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ
ವಿಷಯ:- ಸಾರಿಗೆ ದರವನ್ನು ಹೆಚ್ಚಿಸಿರುವುದರಿಂದ ಸಾಮಾನ್ಯ ಜನರಿಗೆ ತೊಂದರೆಯಾಗಿರುವುದು.

* ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಸನ್ಮಾನ್ಯ ಸಭಾಧ್ಯಕ್ಷರೆ, ಈದಿನದ ಪ್ರಶ್ನೋತ್ತರ ಅವಧಿಯನ್ನು ಸಸ್ಪೆಂಡ್ ಮಾಡಬೇಕು. ಏಕೆಂದರೆ ಸರ್ಕಾರದವರು ಸಾರಿಗೆ ದರವನ್ನು ಶೇಕಡ ೨೨ರಿಂದ ೨೫ರಷ್ಟು ಏರಿಸಿದ್ದಾರೆ. ಇದರಿಂದ ಸಾಮಾನ್ಯ ಜನರು ಇವೊತ್ತು ಜೀವನ ಮಾಡುವಂಥ ಸ್ಥಿತಿಯಲ್ಲಿಲ್ಲ. ಇವೊತ್ತು ವಿಧಾನ ಸಭೆ ಅಧಿವೇಶನ ಸೇರುವುದು ಗೊತ್ತಿದೆ, ಬಜೆಟ್ ಅಧಿವೇಶನ ಸೇರುವುದು ಗೊತ್ತಿದ್ದರೂ ಕೂಡ ಈಗಾಗಲೇ ಸಾರಿಗೆ ದರ ಜಾಸ್ತಿಯಾಗಿದ್ದು, ಸರ್ಕಾರ ಅದನ್ನು ಸಂಪೂರ್ಣವಾಗಿ ವಾಪಸ್ಸು ತೆಗೆದುಕೊಳ್ಳಬೇಕು. ಆದುದರಿಂದ, ಪ್ರಶ್ನೋತ್ತರ ಅವಧಿಯನ್ನು ಸಸ್ಪೆಂಡ್ ಮಾಡಿ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಕಾಲವನ್ನು ರದ್ದು ಮಾಡಿ ನಿಲುವಳಿ ಸೂಚನೆಗೆ ತಾವು ಅವಕಾಶ ಮಾಡಿಕೊಡಬೇಕು, ನಿಲುವಳಿ ಸೂಚನೆ ಬಗ್ಗೆ ಇಲ್ಲಿ ಚರ್ಚೆಯಾಗಲೇಬೇಕು. ಇದು ಬಹಳ ಪ್ರಮುಖವಾದಂಥ ಪ್ರಶ್ನೆಯಾಗಿದ್ದು, ಈ ಬಸ್ ದರ ಏರಿಕೆಯಿಂದಾಗಿ ಅತ್ಯಂತ ನೋವಿನ ಪ್ರಸಂಗ ಉಂಟಾಗಿದೆ. ಜನ ಸಾಮಾನ್ಯರ ತಲೆ ಮೇಲೆ ಅದರಲ್ಲಿಯೂ ಬಡ ಜನರ ಮೇಲೆ ಭಾರಿ ಹೊರೆ ಹೊರಿಸಿದ್ದಾರೆ. ಇವೊತ್ತಿನ ಪರಿಸ್ಥಿತಿ ಒಳ್ಳೆಯ ವಾತಾವರಣದಲಿಲ್ಲ. ಆದುದರಿಂದ, ತಾವು ಪ್ರಶ್ನೋತ್ತರ ಕಾಲವನ್ನು ರದ್ದುಪಡಿಸಬೇಕು. ಇವೊತ್ತು ನಮಗೆ 'ಕರಾಳ ದಿನಾಚರಣೆ' ಯಾಗಿದೆ.

ಅಧ್ಯಕ್ಷರು:- ಪದ್ಧತಿ ಪ್ರಕಾರ ಮೊದಲು ಪ್ರಶ್ನೋತ್ತರ ಅವಧಿ ಮುಗಿದ ನಂತರ ಬೇರೆ ವಿಷಯಗಳ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಈಗ ಪ್ರಶ್ನೋತ್ತರ ಕಾಲವನ್ನು ರದ್ದು ಮಾಡತಕ್ಕಂಥ ಅಧಿಕಾರ ತಮಗಿದೆ. ತಮಗೆ ಹೇಳುವುದಾದರೆ ಇವೊತ್ತು ಇದಕ್ಕಿಂತ ಪ್ರಾಮುಖ್ಯವಾದಂಥ ವಿಷಯ ಮತ್ಯಾವುದೂ ಇಲ್ಲ. ಇಡೀ ರಾಜ್ಯದ ಅನೇಕ ಕಡೆಗಳಲ್ಲಿ ಬಸ್ ದರ ಏರಿಕೆ ಪ್ರತಿಭಟಿಸಿ ಬಸ್ ತಡೆ ಚಳುವಳಿ ನಡೆಯುತ್ತಿದೆ, ಬಸ್ ದರ ಏರಿಕೆಯಿಂದ ಜನರು ತುಂಬಾ ಕಂಗಾಲಾಗಿದ್ದಾರೆ. ಇಡೀ ರಾಜ್ಯದಲ್ಲಿ ಒಂದು ರೀತಿಯ 'ಕರಾಳ' ಪರಿಸ್ಥಿತಿಯುಂಟಾಗಿದೆ. ಇಂತಹ ಪರಿಸ್ಥಿತಿ ಎಂದಿಗೂ ಉದ್ಭವವಾಗಬಾರದು. ದಯಮಾಡಿ ತಾವು ಪ್ರಶ್ನೋತ್ತರ ಕಾಲವನ್ನು ರದ್ದುಪಡಿಸಬೇಕು. ನಮಗಂತೂ ಇವೊತ್ತು ಕರಾಳ ದಿನಾಚರಣೆಯಾಗಿದೆ. ನಾನು ಸರ್ಕಾರದ ನೀತಿಯ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಮಾಡಿ ಕರಾಳ ದಿನಾಚರಣೆ ಮಾಡುತ್ತಿದ್ದೇನೆ. ಇದು ಒಳ್ಳೆಯ ನೀತಿಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇವೊತ್ತು ಸುಮಾರು ೫೫ ಲಕ್ಷ ಜನರು ಸಾರಿಗೆ ಸಂಸ್ಥೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಆದುದರಿಂದ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿಲುವಳಿ ಸೂಚನೆಗೆ .....

ಅಧ್ಯಕ್ಷರು:- ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಮೊದಲೇ ಹೇಳಿದ್ದೇನೆ. ಈಗ ಕಲಾಪ ನಡೆಸುವುದಕ್ಕೆ ದಯವಿಟ್ಟು ಮಾನ್ಯ ಸದಸ್ಯರುಗಳೆಲ್ಲರೂ ಸಹಕರಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸರ್ಕಾರ, ಸಭಾ ನಾಯಕರು ಒಪ್ಪಿದರೆ ಪ್ರಶ್ನೋತ್ತರ ಅವಧಿಯನ್ನು ಸಸ್ಪೆಂಡ್ ಮಾಡಿ ನಿಲುವಳಿ ಸೂಚನೆ ಮುಖಾಂತರ ಕೆ.ಎಸ್.ಆರ್.ಟಿ.ಸಿ. ದರ ಏರಿಕೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ವಾಟಾಳ್ ನಾಗರಾಜ್‌ರವರೆ, ನೀವು ಪ್ರತಿದಿನ ಇದೇ ರೀತಿ ಕಪ್ಪು ವಸ್ತ್ರವನ್ನು ಉಪಯೋಗಿಸಿದರೆ ಕಪ್ಪು ವಸ್ತ್ರದ ಕ್ರಯ ಜಾಸ್ತಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಇವೊತ್ತು ಸರ್ಕಾರ, ನಾಡಿನ ಜನತೆ ಕಗ್ಗತ್ತಲೆಯಲ್ಲಿರುವುದರ ಸಂಕೇತ ಈ ಕಪ್ಪು ವಸ್ತ್ರ. ಈ ರೀತಿ ಆಗಬಾರದು. ನಾನೇನು ತಿಳಿದುಕೊಂಡಿದ್ದೆ ಎಂದರೆ, ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿ ಅಧಿಕಾರಕ್ಕೆ ಬಂದಾಗ ನಿಜವಾಗಲೂ ರಾಜ್ಯಕ್ಕೆ ಹೊಸದಾದ ಒಂದು ಆಯಾಮ ಕೊಡುತ್ತಾರೆ, ಬಡವರ ಬಗ್ಗೆ ಚಿಂತನೆ ಮಾಡುತ್ತಾರೆಂದುಕೊಂಡಿದ್ದೆ. ಆದರೆ, ತಾವು ಬಡವರ ಬೆನ್ನು ಮುರಿಯುವುದಕ್ಕೆ ಹೊರಟಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ವಾಟಾಳ್ ನಾಗರಾಜ್‌ರವರೇ, ನಿಲುವಳಿ ಸೂಚನೆ ಬಂದಾಗ ಕಾದು ನೋಡಿ. ಏಕೆಂದರೆ, ಪ್ರಶ್ನೋತ್ತರ ವೇಳೆ ಎನ್ನುವುದು ಸದಸ್ಯರುಗಳ ಒಂದು ಮೂಲಭೂತವಾದಂಥ ಹಕ್ಕಿನ ವಿಚಾರವಾಗಿದೆ. ಪ್ರಶ್ನೆಗಳನ್ನು ಕಳುಹಿಸುವುದಕ್ಕೆ ಸದಸ್ಯರುಗಳು ಬಹಳ ಶ್ರಮ ವಹಿಸುತ್ತಾರೆ, ಅಂತೆಯೇ ಪ್ರಶ್ನೆಗಳಿಗೆಲ್ಲಾ ಸರ್ಕಾರ ಉತ್ತರ ಕೊಟ್ಟಿದೆ. ಆದುದರಿಂದ ಕ್ರಮವಾಗಿ ಕಲಾಪ ನಡೆಯಲಿ. ನಿಲುವಳಿ ಸೂಚನೆ ಬಂದಾಗ ಅದರ ವಿಷಯ ಎತ್ತುವುದಕ್ಕೆ ನಾವೇನೂ ಆಕ್ಷೇಪ ಮಾಡುವದಿಲ್ಲ, ಅದರ ಬಗ್ಗೆ ಚರ್ಚೆಯಾಗಲಿ. ಚರ್ಚೆಗೆ ನಾವು ಯಾವುದೇ ರೀತಿಯಲ್ಲಿ ತೊಂದರೆಯುಂಟು ಮಾಡುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ನೀವು ಕೆಟ್ಟ ಆಡಳಿತಕ್ಕೆ ಶಸ್ತ್ರಚಿಕಿತ್ಸೆ ಮಾಡುತ್ತೇವೆಂದು ಹೇಳಿದವರೆ ಈಗ ಬಡ ಜನರ ಜೇಬಿಗೆ ಶಸ್ತ್ರಚಿಕಿತ್ಸೆ ಮಾಡಿದ್ದೀರಿ. ಇದನ್ನು ನಿಜವಾಗಿಯೂ ರಾಜ್ಯದ ಜನತೆ ಸಹಿಸುವುದಿಲ್ಲ, ಜನರು ಶಾಪ ಹಾಕುತ್ತಿದ್ದಾರೆ.

ಸಂತಾಪ ಸೂಚನೆಗಳು

ಅಧ್ಯಕ್ಷರು: ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಜಿ.ಸಿ. ಪಾಟೀಲ್ ಹಾಗೂ ವಿಶ್ವವಿಖ್ಯಾತ ಕಲಾವಿದ ಪದ್ಮಭೂಷಣ ಡಾ. ಸ್ಟೆಟೋಸ್ಲಾವ್ ರೋರಿಕ್‌ರವರ ನಿಧನದ ಸುದ್ದಿಯನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಜಿ.ಸಿ. ಪಾಟೀಲ್‌ರವರು ದಿನಾಂಕ ೯-೨-೧೯೯೩ ರಂದು ನಿಧನರಾದರು. ವೃತ್ತಿಯಲ್ಲಿ ಕೃಷಿಕರು ಹಾಗೂ ವಕೀಲರು. ಶ್ರೀಯುತರು ೧೯೭೨ ರಿಂದ ೧೯೭೭ರ ಅವಧಿಯಲ್ಲಿ ಕಲಘಟಗಿ ಕ್ಷೇತ್ರವನ್ನು ಪ್ರತಿನಿಧಿಸಿ ಸೇವೆ ಸಲ್ಲಿಸಿರುವುದರ ಜೊತೆಗೆ ಕಲಘಟಗಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘದ ನಿರ್ದೇಶಕರಾಗಿ ಹಾಗೂ ಧಾರವಾಡ ರೋಟರಿ ಕ್ಲಬ್ಬಿನ ಸದಸ್ಯರಾಗಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ. ಪದ್ಮಭೂಷಣ ಪ್ರಶಸ್ತಿ ವಿಜೇತ